ಕತೆಯನ್ನು ಅಸಾಮಾನ್ಯವಾಗಿ ಚಿತ್ರಿಸುತ್ತದೆ. ರಷ್ಯಾದವರು ತಮ್ಮ ಬಾಂಬ್ ಸ್ಫೋಟದ ಪರೀಕ್ಷೆಗಾಗಿ ಬಳಸಿದ ನಿರ್ಜನವಾದ ಹಾಗೂ ವಿಶಾಲವಾದ ಒಂದು ಹುಲ್ಲುಗಾವಲಿನಲ್ಲಿರುವ ಒಂಟಿ ಮನೆಯಲ್ಲಿ ವಾಸವಿರುವ ಮಧ್ಯ ವಯಸ್ಸು ದಾಟಿದ ರೈತಾಪಿ ವೃತ್ತಿ ಮಾಡುವ ಓರ್ವ ಅಪ್ಪ ಮತ್ತು ಅವನ ಸುಂದರಿಯಾದ ಮಗಳೊಬ್ಬಳ ನವಿರಾದ ಕತೆ ಇದು.

ಚಿತ್ರ ಆರಂಭವಾಗುವುದು ಆ ಅಪ್ಪ (ನಟ: ಕರೀಮ್ ಪಕಾಚಕೋವ್) ಹುಲ್ಲುಗಾವಲಿನ ನಟ್ಟ ನಡುವೆ ನಿಂತಿದ್ದ ತನ್ನ ಟ್ರಕ್‌ನ ಖಾಲಿ ಬೆನ್ನ ಮೇಲೆ ತನ್ನ ಕುರಿಯನ್ನೇ ತಲೆದಿಂಬಾಗಿ ಮಾಡಿ ಗಾಢನಿದ್ರೆಯಲ್ಲಿ ಮಲಗಿದ್ದಾನೆ. ಆಗಲೆ ಚಿತ್ರದ ನಾಮಫಲಕಗಳೂ ಮೂಡುತ್ತವೆ. ಅವನೆದ್ದು ಕೆಳಗಿಳಿಯುವಾಗ ಮತ್ತು ಟ್ರಕ್ ಹೊರಡಿಸುವಾಗ ನಿಧಾನವಾಗಿ ಒಂದೇ ಒಂದು ಮನೆಯೂ ಇಲ್ಲದ ಮಟ್ಟಸವಾದ ಆ ಸುಂದರ ಹುಲ್ಲುಗಾವಲಿನ ಪೂರ್ಣ ಆಕಾರ ಕಾಣಿಸುತ್ತದೆ. ಟ್ರಕ್ ಹುಲ್ಲುಗಾವಲಿನ ಮಧ್ಯೆ ಇರುವ ಅವನ ಒಂಟಿ ಮನೆಯ ಬಳಿ ಬಂದು ನಿಲ್ಲುತ್ತದೆ. ಅವನ ಮಗಳು (ನಟಿ: ಎಲೆನಾ ಆನ್ ಇದು ಅವಳ ನಟನೆಯ ಮೊದಲ ಚಿತ್ರ) ಅವನ ಬಸವಳಿದ ಕಾಲುಗಳನ್ನು ಬಿಸಿನೀರಿನಲ್ಲಿ ತೊಳೆದು ಆರೈಕೆ ಮಾಡುತ್ತಾಳೆ. ಅಪ್ಪ ಮತ್ತು ಮಗಳನ್ನು ಬಿಟ್ಟು ಎಷ್ಟೇ ದೂರ ಕಣ್ಣು ಹಾಯಿಸಿದರೂ ಇನ್ನೊಬ್ಬ ಜೀವಿ ಕಾಣದ ಆ ಹುಲ್ಲುಗಾವಲಿನಲ್ಲಿ ಬೇರೆ ಯಾರೂ ಇಲ್ಲ. ಅಪ್ಪ ಕೆಲಸಕ್ಕೆ ಹೋಗುತ್ತಾನೆ. ಮಗಳು ಮನೆಯಲ್ಲಿ ಇರುತ್ತಾಳೆ. ಕೆಲವೊಮ್ಮೆ ಅಪ್ಪ ಕೆಲಸಕ್ಕೆ ಹೋಗುವಾಗ ಒಂದಷ್ಟು ದೂರ ಮಗಳೂ ಅವನ ಜೊತೆ ಹೋಗುತ್ತಾಳೆ. ಅಲ್ಲಿ ಒಂದು ಕಡೆ ದಾರಿ ಇಬ್ಭಾಗವಾಗಿ ಹೋಗುವೆಡೆ ಆಕೆ ಇಳಿದು ಅಪ್ಪ ಮುಂದೆ ಹೋಗುತ್ತಾನೆ. ಆಗ ಒಬ್ಬ ಹುಡುಗ(ಅವನು ಎಲ್ಲಿಂದ ಬರುತ್ತಾನೆ, ಎಲ್ಲಿ ಅವನ ಮನೆ ಇತ್ಯಾದಿ ವಿವರಗಳು ಚಿತ್ರದಲ್ಲಿಲ್ಲ. ಆದರೆ ಅವನು ಸ್ವದೇಶಿ ಎನ್ನುವುದಂತೂ ಸ್ಪಷ್ಟ) ಅಲ್ಲಿಗೆ ಒಂದು ಕುದುರೆಯ ಮೇಲೆ ಬಂದು ಅವಳನ್ನು ಮನೆ ಮುಟ್ಟಿಸಿ ಹೊರಟು ಹೋಗುತ್ತಾನೆ. ಬಹುಶಃ ಅವನಿಗೂ ಅವಳಿಗೂ ಮದುವೆ ನಿಶ್ಚಯವಾಗಿರಬಹುದು ಎಂಬ ಸೂಚನೆ ಕಾಣುತ್ತದೆಯಾದರೂ ಅದಕ್ಕೆ ಪುರಾವೆಗಳಿಲ್ಲ. ಇದರಾಚೆ ಯಾವ ಹೊರಳುವಿಕೆಯೂ ಇಲ್ಲದ ಏಕತಾನತೆಯ ಜೀವನ ಅವರದ್ದು. ಒಂದು ದಿನ ದೂರದ ದಿಗಂತದಂಚಿನಲ್ಲಿ ಅಪರೂಪದ, ಆತಂಕಗೊಳಿಸುವ, ಕಣ್ಣು ಕೋರೈಸುವ ಬೆಳಕಿರುವ ವಸ್ತುವೊಂದನ್ನು ಕಂಡು ಅವರಿಗೆ ದಿಗಿಲಾಗುತ್ತದೆ.

ಕೆಟ್ಟು ನಿಂತ ಮಿಲಿಟರಿ ವಾಹನವೊಂದಕ್ಕಾಗಿ ನೀರು ತರಲು ಬಕೆಟ್ ಹಿಡಿದುಕೊಂಡು ಒಬ್ಬ ಹೊಸ ಹುಡುಗ ಅವರ ಮನೆಯ ಬಳಿ ಬರುತ್ತಾನೆ. ಅವನ ಉಡುಪು, ಅವನ ಕೆಂಚಾದ ತಲೆಗೂದಲು ಎಲ್ಲ ಆತ ಈ ಪ್ರದೇಶದವನಲ್ಲ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಅವನು ಜರ್ಮನ್ ಇರಬೇಕೆಂಬ ಭಾವನೆ ಮೂಡಿದರೂ ತಪ್ಪಲ್ಲ. ನೀರಿಗಾಗಿ ಬಂದ ಆತ ಮನೆಯಲ್ಲಿದ್ದ ಆ ಸುಂದರ ಹುಡುಗಿಯನ್ನು ಕಂಡು ಮೋಹಿತನಾಗುತ್ತಾನೆ. ತನ್ನ ಬಳಿ ಇದ್ದ ಒಂದು ಹಳೆಯ ಮೂವೀ ಕ್ಯಾಮೆರಾದಿಂದ ಅವಳನ್ನು ಚಿತ್ರೀಕರಿಸಿ ಅದನ್ನು ಮನೆಯ ಮುರುಕಲು ಗೋಡೆಯ ಮೇಲೆ ಪ್ರದರ್ಶಿಸಿ ಆತ ಅವಳನ್ನು ಆಕರ್ಷಿಸುತ್ತಾನೆ. ಈಗಾಗಲೇ ಅವಳೊಂದಿಗೆ ಮದುವೆ ನಿಶ್ಚಯವಾದ ಭ್ರಮೆಯನ್ನುಂಟುಮಾಡುವ ಕುದುರೆಯೇರಿ ಬರುವ ಹುಡುಗ ಇವರ ಅನುರಾಗ ಕಂಡು ಕೆರಳುತ್ತಾನೆ. ಇಬ್ಬರು ಹುಡುಗರೂ ಅವಳಿಗಾಗಿ ಪರಸ್ಪರ ಹೋರಾಡುತ್ತಾರೆ. ಕೊನೆಗೆ ವಿದೇಶೀ ಹುಡುಗನೇ ಗೆದ್ದು ಪ್ರೇಮಿಗಳಿಬ್ಬರೂ ಹತ್ತಿರವಾಗುತ್ತಾರೆ. ಸೈನಿಕರು ಬಂದು ಅಪ್ಪನನ್ನು ಹಿಂಸಿಸುತ್ತಾರೆ. ಆ ಬಯಲು ಪ್ರದೇಶದಲ್ಲಿ ರಷ್ಯಾ ಸರಕಾರ ಹೈಡ್ರೋಜನ್ ಬಾಂಬ್ ಸ್ಫೋಟದ ಪರೀಕ್ಷೆ ನಡೆಸುತ್ತದೆ. ಅದರಿಂದಾಗಿ ಎಲ್ಲವೂ ನಿರ್ನಾಮಗೊಳ್ಳುತ್ತದೆ. ಚಿತ್ರದ ಕತೆ ಇಷ್ಟು.